



ಹೆಜ್ಜಾರ್ಲೆಯ ನೀರಾಟ



ಬಣ್ಣದ ಕೊಕ್ಕರೆಗೆ
ಆಹಾರ ಸಿಕ್ಕ ಖುಷಿ

ಪರ್ವತಗಳನ್ನು ದಾಟಿ ಭಾರತಕ್ಕೆ ವಲಸೆ ಬರುವ ಈ ಹಕ್ಕಿಗಳಿಗೆ ಕರ್ನಾಟಕದ ಕೆರೆಗಳ ಮೇಲೆ ಅದೇನೋ ವಿಶೇಷ ಅಕ್ಕರೆ.

ಇಲ್ಲಿಯ ಶೀತೋಷ್ಣವಾತಾವರಣ ಅವುಗಳಿಗೆ ಭಾರೀ ಇಷ್ಟ. ಆಹಾರ, ವಂಶಾಭಿವೃದ್ಧಿಗೆ ಅನುಕೂಲಕರ ಹವಾಮಾನವಿರುವುದರಿಂದ ಮನಸೋಇಚ್ಛೆ ಇಲ್ಲಿ ಉಳಿದುಕೊಳ್ಳುತ್ತವೆ. ಈ ವರ್ಷವೂ ಸಾಕಷ್ಟು ಸಂಖ್ಯೆಯಲ್ಲಿ ಥರಾವರಿ ಹಕ್ಕಿಗಳು ಆಗಮಿಸಿದ್ದು, ಅದರಲ್ಲಿ ಮಂಗೋಲಿಯಾದ ಹೆಬ್ಬಾತುಗಳು ಗದುಗಿನ ಮಾಗಡಿಕೆರೆ, ಮೈಸೂರಿನ ಹದಿನಾರು ಕೆರೆ, ಆಲಮಟ್ಟಿಯ ಹಿನ್ನೀರಿನಲ್ಲಿ ಬೀಡುಬಿಟ್ಟಿವೆ.

ಹೊಸಪೇಟೆಯ ಹಗರಿಬೊಮ್ಮನಹಳ್ಳಿಯ ತುಂಗಭದ್ರಾ ಹಿನ್ನೀರು, ಆಲಮಟ್ಟಿ ಹಿನ್ನೀರಿನಲ್ಲಿ ರಾಜಹಂಸಗಳ ದೊಡ್ಡ ಹಿಂಡೇ ಸೇರಿದೆ. ನೀಳ ದೇಹದ ಈ ಸುಂದರ ಹಕ್ಕಿಗಳು ಅದಾಗಲೇ ಆಹಾರ ಶೋಧನೆಯಲ್ಲಿ ಮಗ್ನವಾಗಿವೆ.

ಕೊಕ್ಕರೆಗಳಿಗೆ ಹೇಳಿಮಾಡಿಸಿದಂತಿರುವ ಮೈಸೂರಿನ ಸಮೀಪದ ರಂಗನತಿಟ್ಟು ಪಕ್ಷಿಧಾಮದಲ್ಲಿ ಹೆಜ್ಜಾರ್ಲೆ, ಚಮಚದ ಕೊಕ್ಕು, ಬಾಯ್ಕಳಕ, ಗೋವಕ್ಕಿ, ನಾರ್ತನ್ ಶೋವೆಲ್ಲರ್, ಬಿಳಿ ಕೆಂಬರಲು, ಇವುಗಳ ಜೊತೆಗೆ ಚಿಲಕಬಾತು, ಪಿಂಕ್ ಟೈಲ್, ಸಿಳ್ಳೇಬಾತು, ವರಟೆಬಾತು, ಸೂಜಿಬಾಲದ ಬಾತು, ಬ್ರೌನ್‌ಹೆಡೆಡ್ ಸೀಗಲ್ ಹೀಗೆ ಸುಂದರ ಬಾನಾಡಿಗಳ ಪರಿವಾರ ವಾಸಕ್ಕೆ ಸಜ್ಜುಮಾಡಿಕೊಂಡಿವೆ.

ಡಿಸೆಂಬರ್ ತಿಂಗಳಲ್ಲಿ ಆಗಮಿಸಿರುವ ಈ ಹಕ್ಕಿಗಳು ಈಗ ಬೇಸಿಗೆಯ ದಿನಗಳಿಗೆ ಏರ್ಪಾಟು ನಡೆಸಿವೆ. ಪ್ರಿಯತಮೆ ನೆಚ್ಚುವಂತೆ ಗೂಡು ಕಟ್ಟುವ ಗಂಡು ಹಕ್ಕಿಗಳ ಶ್ರಮ, ವಂಶಾಭಿವೃದ್ಧಿ ಮಾಡಿ ಮರಿಗಳಿಗೆ ಗಳಿಗೆಗೊಮ್ಮೆ ನಾನಾ ವಿಧದ ಭಕ್ಷ್ಯ ಭೋಜನಗಳನ್ನು ತಂದು ಕೊಡುವ ತಾಯಿ ಹಕ್ಕಿಗಳ ಪ್ರೀತಿ, ಮರಿಗಳ ಚೆಲ್ಲಾಟ, ಓಡಾಟ ನೋಡುವುದೇ ಕಣ್ಣಿಗೆ ಹಬ್ಬ. ಕೈಯಲ್ಲೊಂದು ಕ್ಯಾಮೆರಾ ಇದ್ದರೆ ಮನ ತಣಿಯುವಷ್ಟು ಪಕ್ಷಿಗಳನ್ನು ಹೀಗೆ 'ಸೆರೆ'ಹಿಡಿದುಕೊಳ್ಳಬಹುದು, ನೀಲಾಕಾಶದಲ್ಲಿ ಹಾರಿ ಹೋಗುವ ಮುನ್ನ...



ಜಲಕ್ರೀಡೆಯಲ್ಲಿ ಪಟ್ಟೆತಲೆ
ಹೆಬ್ಬಾತುಗಳ ಪರಿವಾರ